ದಿನಾಂಕಃ **06.09.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ

01. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ವಾದಿಗಳು ಯಾವ ಪರಿಹಾರಕ್ಕಾಗಿ ಈ ದಾವೆ ಹಾಕಿದ್ದಾರೆ? ಎಂದರೆ ಪಾಲುವಿಭಾಗ ಆಗಿಲ್ಲವೆಂದು ದಾವೆ ಹಾಕಿದ್ದಾರೆ ಆದರೆ 2008 ರಲ್ಲಿ ಪಾಲುಪಟ್ಟಿಯಾಗಿರುತ್ತದೆ. ನನ್ನ ತಾತನ ಹೆಸರು ಇದ್ಲಿ ಹನುಮಂತಪ್ಪ ಎಂದರೆ ಸರಿ. ನನ್ನ ತಾತನಿಗೆ ಇದ್ಲಿ ದೊಡ್ಡಭರಮಪ್ಪ, ಇದ್ಲಿ ನಿಂಗಪ್ಪ ಮತ್ತು ಇದ್ಲಿ ಸಣ್ಣಭರಮಪ್ಪ ಎಂಬ 3 ಜನ ಮಕ್ಕಳಿದ್ದರು ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ಇದ್ಲಿ ದೊಡ್ಡಭರಮಪ್ಪ ಮಕ್ಕಳು ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. 5 ರಿಂದ 8 ನೇ ಪ್ರತಿವಾದಿಗಳು ಇದ್ಲಿ ನಿಂಗಪ್ಪನ ಮಕ್ಕಳು ಎಂದರೆ ಸರಿ. 1 ರಿಂದ 6 ನೇ ವಾದಿಗಳು ಇದ್ಲಿ ಸಣ್ಣಭರಮಪ್ಪನ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಈ ದಾವೆಯ ಎಲ್ಲಾ ದಾವಾ ಸ್ವತ್ತುಗಳು ನಮ್ಮ ತಾತ ಇದ್ಲಿ ಹನುಮಂತಪ್ಪನಿಂದ ಬಂದ ಆಸ್ತಿಗಳು ಎಂದರೆ ಸರಿ. ವಾದಿಗಳು ಈ ದಾವೆಯನ್ನು ಎಷ್ಟು ಆಸ್ತಿಗಳ ಬಗ್ಗೆ ಸಲ್ಲಿಸಿದ್ದಾರೆ? ಎಂದರೆ ಒಟ್ಟು 13 ಎಕರೆ ಇರುವ ಒಂದೇ ಆಸ್ತಿಯ ಬಗ್ಗೆ ದಾವೆ ಹಾಕಿದ್ದಾರೆ. ನನ್ನ ದೊಡ್ಡಪ್ಪ ಇದ್ಲಿ ದೊಡ್ಡಭರಮಪ್ಪ 2008 ನೇ ಇಸವಿಯಲ್ಲಿ ತೀರಿಕೊಂಡಿರಬಹುದು. ನನ್ನ ದೊಡ್ಡಮ್ಮ ಸುಗಂಧಮ್ಮ ನನ್ನ ದೊಡ್ಡಪ್ಪ ತೀರಿಕೊಂಡ ಒಂದು ತಿಂಗಳ ಆಸುಪಾಸಿನಲ್ಲಿ ತೀರಿಕೊಂಡರು. ನನ್ನ ಚಿಕ್ಕಪ್ಪ ಸಣ್ಣಭರಮಪ್ಪ 2001 ನೇ ಇಸವಿಯಲ್ಲಿ ತೀರಿಕೊಂಡಿರಬಹುದು. ನನ್ನ ತಂದೆ ಇದ್ಲಿ ನಿಂಗಪ್ಪ 2012 ರಲ್ಲಿ ತೀರಿಕೊಂಡರು. ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ, ದೊಡ್ಡಪ್ಪ ಮತ್ತು ಚಿಕ್ಕಪ್ಪ ವಾರಸುದಾರಿಕೆ ಪ್ರಕಾರ ನನ್ನ ತಾತನ ಆಸ್ತಿಗಳನ್ನು ಜಂಟಿಯಾಗಿ ಸ್ವಾಧೀನ ಹೊಂದಿ ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ.

02. ದಾವೆಯ 9 ನೇ ಪ್ರತಿವಾದಿ ಬಂಡಿಗೇರಿ ಪಕ್ಕೀರವ್ವ ಮತ್ತು 10 ನೇ ಪ್ರತಿವಾದಿ ಬಂಡಿಗೇರಿ ಪ್ರಮೀಳಾ ಇವರು ನಮ್ಮ ಕುಟುಂಬಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಿಕರಲ್ಲ ಎಂದರೆ ಸರಿ. ವಾದಿಗಳೂ ಕೂಡಾ ನನ್ನಂತೆಯೇ ಅವಿದ್ಯಾವಂತರು ಎಂದರೆ ಸರಿ. 1, 2 ಮತ್ತು 4 ರಿಂದ 8 ನೇ ಪ್ರತಿವಾದಿಗಳು ಒಬ್ಬರೇ ವಕೀಲರನ್ನು ನೇಮಕ ಮಾಡಿಕೊಂಡು ಜಂಟಿಯಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ನಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಲು ನಮ್ಮ ವಕೀಲರಿಗೆ ಮಾಹಿತಿಯನ್ನು ಯಾರು ಕೊಟ್ಟರು? ಎಂದರೆ ನಾನು ಮತ್ತು 1 ರಿಂದ 3 ನೇ ಪ್ರತಿವಾದಿಗಳು ಮಾಹಿತಿ ಕೊಟ್ಟಿರುತ್ತೇವೆ. ದಾವಾ ಸ್ವತ್ತುಗಳ ಬಗ್ಗೆ ನಮ್ಮ ಕುಟುಂಬದಲ್ಲಿ ಯಾವತ್ತೂ ಪಾಲುವಿಭಾಗ ಆಗಿರಲಿಲ್ಲ ಎಂದರೆ ಆಗಿತ್ತು. 2008 ರಲ್ಲಿ ಪಾಲುವಿಭಾಗ ಆಗಿತ್ತು. ಆ ಪಾಲುವಿಭಾಗ ದೊಡ್ಡಭರಮಪ್ಪ, ನಿಂಗಪ್ಪ ಮತ್ತು ಸಣ್ಣಭರಮಪ್ಪನ ನಡುವೆ ಆಗಿತ್ತು. ಯಾವ ಯಾವ ಆಸ್ತಿಗಳ ನಡುವೆ ಸದರಿ ಪಾಲುವಿಭಾಗವಾಗಿತ್ತು? ಎಂದರೆ 13 ಎಕರೆ ಜಮೀನಿನ ಬಗ್ಗೆ ಪಾಲು ಪಟ್ಟಿ ಆಗಿತ್ತು. ಅದರಲ್ಲಿ 6 ಎಕರೆ 84 ಸೆಂಟ್ಸ್ ಇದ್ಲಿ ನಿಂಗಪ್ಪನ ಹಿಸ್ಸೆಗೆ, 4 ಎಕರೆ 84 ಸೆಂಟ್ಸ್ ದೊಡ್ಡಭರಮಪ್ಪನ ಹಿಸ್ಸೆಗೆ ಮತ್ತು 2 ಎಕರೆ ಸಣ್ಣಭರಮಪ್ಪನ ಹಿಸ್ಸೆಗೆ ಬಂದಿತ್ತು. ಸದರಿ ಪಾಲುಪಟ್ಟಿ ಸರ್ವೇ ನಂ. 337/ಬಿ ಜಮೀನಿನ 13 ಎಕರೆ ಬಗ್ಗೆ ಆಗಿತ್ತು. ಉಳಿದ 4 ಜಮೀನುಗಳು ಮತ್ತು ಒಂದು ಮನೆಯ ಆಸ್ತಿ ಬಗ್ಗೆ ಪಾಲುವಿಭಾಗ ಆಗಿತ್ತೇ? ಎಂದರೆ ಆಗಿತ್ತು, 2008 ರ ಪಾಲುಪಟ್ಟಿಯಲ್ಲಿ ಇವುಗಳನ್ನೂ ಸೇರಿಸಿದ್ದರು. ದಾವಾ ಸ್ವತ್ತುಗಳ ಬಗ್ಗೆ ನಮ್ಮ ಕುಟುಂಬದಲ್ಲಿ ಇದುವರೆಗೆ ಯಾವುದೇ ಪಾಲುವಿಭಾಗ ಆಗದೇ ಇದ್ದರೂ 2008 ರಲ್ಲಿ ಆಗಿತ್ತೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಸದರಿ ಪಾಲುಪಟ್ಟಿ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದರೇ? ಎಂದರೆ ಮಾಡಿಸಿಕೊಂಡಿದ್ದರು. ಆ ರೀತಿ ಆ ಪಾಲುಪಟ್ಟಿಯ

ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುವುದನ್ನು ತೋರಿಸುವ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನಾನು ಕೋರ್ಟಿಗೆ ಹಾಜರುಪಡಿಸಿರುವ ದಾಖಲೆಗಳ ವಿವರಗಳನ್ನು ಅರಿತುಕೊಂಡೇ ಅವುಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿ. ದಾವಾ ಐಟಂ ನಂ.4ರ ಹಕ್ಕು ಬದಲಾವಣೆಯನ್ನು ನಾವು ಮತ್ತು ನನ್ನ ದೊಡ್ಡಪ್ಪನ ವಾರಸುದಾರರು ವೈಯಕ್ತಿಕ ಪತ್ರದ ಮೇಲೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದು ಹಕ್ಕು ಬದಲಾವಣೆ ವಹಿಗಳಲ್ಲಿ ನಮೂದಾಗಿದೆ ಎಂದರೆ 4 ಮಂದಿ ಪಂಚಾಯತಿ ಕೂಡಿ ಮಾಡಿಕೊಂಡ ಪತ್ರದ ಮೇಲೆ ಖಾತೆ ಮಾಡಿಸಿಕೊಂಡಿದ್ದೇವೆ ಆ ಪತ್ರದ ಹೆಸರೇನು? ಎಂದರೆ ಪಾಲುಪಟ್ಟಿ ಇರುತ್ತದೆ. ನಾವು 2012ರಲ್ಲಿ ಅಂದರೆ ನಮ್ಮ ತಂದೆ ತೀರಿಕೊಂಡ ನಂತರ ಆ ಪತ್ರ ಹಾಜರುಪಡಿಸಿ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದೇವೆ. ವಾದಿಗಳು ಅವಿದ್ಯಾವಂತರು ಆಗಿರುವ ಕಾರಣ ನಾನು ಮತ್ತು ನನ್ನ ದೊಡ್ಡಪ್ಪನ ವಾರಸುದಾರರು ನಮಗೆ ಬೇಕಾದ ರೀತಿಯಲ್ಲಿ ದಾಖಲೆಗಳನ್ನು ತಯಾರಿಸಿಕೊಂಡು ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬಗ್ಗೆ ಯಾವತ್ತೂ ಪಾಲುವಿಭಾಗವಾಗಿಲ್ಲ ಎಂದರೆ ಸರಿಯಲ್ಲ.

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.